ಸಾಕ್ಷಿಗೆ ದಿನಾಂಕಃ 03.08.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ – ಅರ್ಜಿದಾರರ ಪರ ವಕೀಲರಿಂದ**

ನಾನು ಎಂ ಕಾಂ ಪದವೀಧರನಾಗಿರುತ್ತೇನೆ. ನಾನು 2016 ರಿಂದ 2020 ರವೆಗೆ ಬನಶಂಕರಿ ಕಾಲೇಜಿನಲ್ಲಿ ಕ್ಲರ್ಕ ಆಗಿ ಕೆಲಸ ಮಾಡಿದ್ದು, ನಂತರ 2021 ರಿಂದ ಲಗ್ಗೇರಿಯಲ್ಲಿ ಕೋಳಿ ಅಂಗಡಿಯನ್ನು ನಡೆಸುತ್ತಿರುತ್ತೇನೆ. ನಾನು 2016 ಕ್ಕಿಂತ ಮೊದಲೇ ಖಾತೆ ಯನ್ನು ತೆರೆದಿರುತ್ತೇನೆ. ಬೆಂಗಳೂರಿನಲ್ಲಿ ಎಸ್ ಬಿ ಐ ಬ್ಯಾಂಕ್ ನಲ್ಲಿ ಖಾತೆಯನ್ನು ಹೊಂದಿದ್ದು, ಬ್ಯಾಂಕ್ ಆಫ್ ಬರೋಡಾದಲ್ಲಿ ಖಾತೆಯನ್ನು ಬೆಸಗರಹಳ್ಳಿ ಶಾಖೆಯಲ್ಲಿ ಹೊಂದಿರುತ್ತೇನೆ. ಸದರೀ ಖಾತೆಯಲ್ಲಿ ಹಣದ ವ್ಯವಹಾರವನ್ನು ಮಾಡಿರುತ್ತೇನೆ. ಒಂದು ಚೆಕ್ ಪುಸ್ತಕವನ್ನೂ ಸಹ ಪಡೆದುಕೊಂಡಿರುತ್ತೇನೆ. ಅದರಲ್ಲಿ ಎಷ್ಟು ಹಾಳೆಗಳು ಖಾಲಿಯಾಗಿರುತ್ತವೆಯೆಂದು ನನಗೆ ಗೊತ್ತಿರುವುದಿಲ್ಲ, ಚೆಕ್ ಗಳನ್ನು ಯಾರಿಗೆ ಕೊಟ್ಟಿರುತ್ತೇನಂದು ನಮೂದು ಮಾಡಿಕೊಂಡಿರುತ್ತೇನೆ. ಬ್ಯಾಂಕ್ ಆಫ್ ಬರೋಡಾ ಶಾಖೆಯ ಅಕೌಂಟ್ ಸ್ಟೇಟ್ ಮೆಂಟ್ ನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ.

ಚೆಕ್ಕುಗಳನ್ನು ಸಾಮಾನ್ಯವಾಗಿ ಹಣದ ವ್ಯವಹಾರಕ್ಕಾಗಿ ಉಪಯೋಗಿಸಲಾಗುತ್ತದೆ. ನನ್ನ ಬ್ಯಾಂಕ್ ಖಾತೆಯಲ್ಲಿ 50 ಲಕ್ಷದಿಂದ 1 ಲಕ್ಷದವರೆಗೆ ಹಣ ಇರುತ್ತಿತ್ತು. ಸದರೀ ಹಣವು ನಮ್ಮ ವ್ಯವಸಾಯ, ಹೈನುಗಾರಿಕೆ ಹಾಗೂ ಇತರೇ ಕೆಲಸಗಳಿಂದಬಂದ ಹಣ ಆಗಿರುತ್ತದೆ. ನನ್ನ ತಂದೆಗೆ ಇಬ್ಬರು ಮಕ್ಕಳಿದ್ದು, ಅವರ ಹೆಸರಿನಲ್ಲಿ ಆಸ್ತಿ ಇರುತ್ತದೆ. ನಮ್ಮ ಮನೆಯಲ್ಲಿ ಎಲ್ಲರೂ ಸೇರಿ ವ್ಯವಸಾಯವನ್ನು ಮಾಡುತ್ತೇವೆ. ನಮಗೆ ಆಸ್ತಿ ಇದ್ದ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿಲ್ಲ. ಸದರೀ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನನಗೆ ಯಾವುದೇ ವ್ಯವಸಾಯ ಇರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ. 1 ನನ್ನ ಬ್ಯಾಂಕ್ ಖಾತೆಗೆ ಸೇರಿದ್ದಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಿ.ಪಿ. 1 ದುರುಪಯೋಗವಾಗಿರುತ್ತದೆಯಂದು ನಾನು ಯಾವುದೇ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿರುವುದಿಲ್ಲ. ನಿ.ಪಿ. 1 ನ್ನುಚೀಟಿ ಭದ್ರತೆಗಾಗಿ ಕೊಟ್ಟಿದ್ದು, ಅದು ದುರುಪಯೋಗವಾಗಿರುತ್ತದೆಯೆಂದು ಈ ಪ್ರಕರಣ ದಾಖಲಾಗಿ ನನ್ನನ್ನು ವಾರೆಂಟ್ ಆಧಾರದ ಮೇಲೆ ಕರೆದುಕೊಂಡು ಬಂದದದಾಗ ಗೊತ್ತಾಗಿರುತ್ತದೆ. ತದನಂತರ ನಾನು ಯಾವುದೇ ಕಾನೂನು ಕ್ರಮವನ್ನು ಪಿರ್ಯಾದುದಾರರು ಮತ್ತು ಬೇರೆಯವರ ವಿರುದ್ಧ ತೆಗೆದುಕೊಂಡಿರುವುದಿಲ್ಲ. ಹಾಗೂ ಆ ರೀತಿ ಕ್ರಮ ತೆಗೆದುಕೊಳ್ಳಲು ಯಾವುದೇ ತೊಂದರೆ ಇರುವುದಿಲ್ಲ. ನಾನು ಚೀಟಿ ಭದ್ರತೆಗೆ ನಿ.ಪಿ. 1 ನ್ನು ಕೊಟ್ಟಿರುಲಿಲ್ಲ ಎಂದರೆ ಸರಿಯಲ್ಲ. ನಾನು ಪಿರ್ಯಾದುದಾರರ ಮನೆಗೆ ಹೋಗಿ ಬರುತ್ತಿದ್ದೆ, ಅವರೂ ಸಹ ನಮ್ಮ ಮನೆಗೆ ಹೋಗಿ ಬರುತ್ತಿದ್ದರು, ನಾನು ಪಿರ್ಯಾದುದಾರರಿಂದ ಯಾವುದೇ ಹಣವನು ಸಾಲವಾಗಿ ಪಡೆದುಕೊಂಡಿರುವುದಿಲ್ಲ. ನಾನು ಮಾಡುತ್ತಿರುವ ಕೆಲಸದಿಂದಲೂ ಕೂಡ ಯಾವುದೇ ಸಾಲವನ್ನು ಪಡೆದುಕೊಂಡಿರುವುದಿಲ್ಲ. ಪಿರ್ಯಾದುದಾರರಿಗೆ ಕೊಡಬೇಕಾಗಿರುವ ಹಣದ ಭಾಧ್ಯಸ್ಥಿಕೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿ.ಪಿ. 3 ರಲ್ಲಿರುವ ವಿಳಾಸ ನನ್ನದೇ ಆಗಿರುತ್ತದೆ. ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ನಮೂದು ಮಾಡಿಸಿರುತ್ತೇನೆಂದರೆ ಸರಿಯಲ್ಲ. ಪಿರ್ಯಾದುದಾರರಿಂದ ಪಡೆದುಕೊಂಡಿದ್ದ ಸಾಲದ ಮರುಪಾವತಿಗಾಗಿ ನಿ.ಪಿ. 1 ನ್ನು ಕೊಟ್ಟಿದ್ದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

ಪ್ರಧಾನ ಸಿವಿಲ್  ನ್ಯಾಯಾಧೀಶರು

ಸಾಕ್ಷಿ ಸಹಿ                                        ಮತ್ತು ಜೆ ಎಂ ಎಫ್ ಸಿ , ಮದ್ದೂರು.